**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 71/2018**

**ಚಾಸಾಃ 01 ಪ್ರಾಸಾಃ 02**

ದಿಃ 17.07.2025 ರಂದು ಸಾಕ್ಷಿಯ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಪ್ರಾಜ್ಞ ಸ.ಸ.ಅ ರವರಿಂದಃ**

ಸಾಕ್ಷಿ ಈ ದಿನ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ 90 ಎಂ.ಎಲ್ ನ 42 ಟೆಟ್ರಾ ಪ್ಯಾಕೇಟುಗಳ ಪೈಕಿ 28 ಟೆಟ್ರಾ ಪ್ಯಾಕೆಟುಗಳನ್ನು ನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಮುದ್ದೆಮಾಲು 1 ಎಂದು ಗುರುತಿಸಲಾಯಿತು. ಮೂರು ಪ್ಲಾಸ್ಟಿಕ್ ಜಗ್ಗುಗಳನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ 2 ಎಂದು, 2 ಲೀ ಸಾಮರ್ಥ್ಯದ ನಾಲ್ಕು ನೀರಿನ ಬಾಟಲಿಗಳನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ 3 ಎಂದು, 10 ಪ್ಲಾಸ್ಟಿಕ್ ಲೋಟಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ 4 ಎಂದು ಗುರುತಿಸಲಾಯಿತು. 90 ಎಂ.ಎಲ್ ನ ಒರಿಜಿನಲ್ ಚಾಯ್ಸ್ ವಿಸ್ಕಿಯ ಖಾಲಿ 05 ಟೆಟ್ರಾ ಪ್ಯಾಕೇಟುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಮು.ಮಾ 5 ಎಂದು ಗುರುತಿಸಲಾಯಿತು.

ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ಟಿ.ಜಿ.ಎಂ ವಕೀಲರಿಂದಃ**

ನಾನು ಗಸ್ತಿನಲ್ಲಿದ್ದಾಗ ಕೃತ್ಯದ ಬಗ್ಗೆ ಮಾಹಿತಿ ಮಾನ್ಯ ಎಸ್.ಪಿ ರವರಿಂದ ಮೌಖಿಕವಾಗಿ ಬಂದಿರುತ್ತದೆ. ಆಗ ಸಮಯ ಅಂದಾಜು 9.45 ಗಂಟೆ ಆಗಿರಬಹುದು. ಸದರಿ ವಿಚಾರ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಳಿಸಿಲ್ಲ ಎಂದರೆ ಸರಿಯಲ್ಲ. ಚಾಸಾ 2 ಮತ್ತು 3 ರವರು ಪೊಲೀಸ್ ಠಾಣೆಯ ಮುಂದೆ ಇದ್ದು ಅವರನ್ನು ಪಂಚರಾಗಿ ಸಹಕರಿಸುವಂತೆ ಹೇಳಿರುತ್ತೇನೆ. ಚಾಸಾ 2 ಮತ್ತು 3 ರವರಿಗೆ ಈ ಪ್ರಕರಣದ ವಿಷಯವನ್ನು ತಿಳಿಸಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ. ಪೊಲೀಸ್ ಠಾಣೆಯನ್ನು 9.45 ಗಂಟೆಗೆ ಬಿಟ್ಟು ಎಡತಲೆ ಗ್ರಾಮಕ್ಕೆ ಹೋಗಿರುತ್ತೇವೆ. ಎಡತಲೆ ಗ್ರಾಮ ಪೊಲೀಸ್ ಠಾಣೆಯಿಂದ ಅಂದಾಜು 8-10 ಕಿ.ಮೀ ದೂರದಲ್ಲಿರುತ್ತದೆ. ನಾನು ಯಾವುದೇ ಸಿಬ್ಬಂದಿಗಳನ್ನು ನನ್ನೊಂದಿಗೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ಮಹಜರ್ ಸಮಯದಲ್ಲಿ ಯಾವುದೇ ಫೋಟೋ ಅಥವಾ ವಿಡಿಯೋ ಮಾಡಿರುವುದಿಲ್ಲ. ಕೃತ್ಯ ಸ್ಥಳದಿಂದ 4-5 ಜನ ಓಡಿ ಹೋಗಿದ್ದು, ನಮಗೆ 2 ಜನ ಸಿಕ್ಕಿರುತ್ತಾರೆ. ಕೃತ್ಯ ಸ್ಥಳದಿಂದ ಓಡಿ ಹೋದ 4-5 ಜನ ವ್ಯಕ್ತಿಗಳ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ. ಕೃತ್ಯ ಸ್ಥಳ ಎಂ ಎಸ್ ಐ ಎಲ್ ಅಂಗಡಿಗೆ ಹೊಂದಿಕೊಂಡಿರುವಂತಹ ಅಂಗಡಿ. ಸದರಿ ಎಂ ಎಸ್ ಐ ಎಲ್ ಅಥವಾ ಹೊಂದಿಕೊಂಡಿರುವ ಅಂಗಡಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ದಾಳಿಗೆ ಹೋದಾಗ ಕೃತ್ಯ ಸ್ಥಳದಿಂದ ದೂರದಲ್ಲಿ ಸುಮಾರು 10-15 ಜನ ಸಾರ್ವಜನಿಕರು ಹಾಜರಿದ್ದರು. ಸದರಿ ಸಾರ್ವಜನಿಕರನ್ನು ವಿಚಾರಣೆ ಮಾಡಲು ನನಗೆ ಯಾವುದೇ ತೊಂದರೆ ಇಲ್ಲ. ದಾಳಿಯ ಸಮಯದಲ್ಲಿ ನಾನು ಎಂ ಎಸ್ ಐ ಎಲ್ ಅಂಗಡಿಯ ಒಳಗಡೆ ಸಹ ಹೋಗಿರುತ್ತೇನೆ. ಎಂ ಎಸ್ ಐ ಎಲ್ ಅಂಗಡಿಯಲ್ಲಿ ಮಾರಾಟ ಮತ್ತು ಸ್ಟಾಕ್ ಬಗ್ಗೆ ವಿಚಾರಣೆ ಮಾಡಿ ನಾನು ಯಾವುದೇ ದಾಖಲೆಗಳನ್ನು ಪಡೆದಿಲ್ಲ. ಎಂ ಎಸ್ ಐ ಎಲ್ ಅಂಗಡಿಯ ಪಶ್ಚಿಮಕ್ಕೆ ಕೃತ್ಯ ಸ್ಥಳ ಇರುತ್ತದೆ. ಮಹಜರ್ ನಲ್ಲಿ ಕೃತ್ಯ ಸ್ಥಳದ ಬಗ್ಗೆ ಸರಿಯಾಗಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಎಂ ಎಸ್ ಐ ಎಲ್ ಅಂಗಡಿಯಲ್ಲಿ ನಾವು ಹೋದಾಗ ಯಾರು ಇರಲಿಲ್ಲ. ಚುನಾವಣಾ ಸಮಯದಲ್ಲಿ ಮೇಲಧಿಕಾರಿಗಳಿಂದ ನಿಗದಿತ ಪ್ರಕರಣಗಳನ್ನು ದಾಖಲಿಸುವಂತೆ ಒತ್ತಡ ಇರುತ್ತದೆ ಎಂದರೆ ಸರಿಯಲ್ಲ. ಆದಕಾರಣ ಆರೋಪಿಗಳ ವಿರುದ್ಧ ಈ ಪ್ರಕರಣವನ್ನು ಸೃಷ್ಟಿಸಿ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೂ ಹಾಗೂ ಈ ಪ್ರಕರಣಕ್ಕೂ ಹಾಗೂ ಮುದ್ದೆಮಾಲುಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಕೃತ್ಯ ಸ್ಥಳದಲ್ಲಿ ಯಾವುದೇ ಮಹಜರ್ ಮಾಡಿಲ್ಲ ಹಾಗೂ ಆರೋಪಿಗಳಿಂದ ಯಾವುದೇ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಮುದ್ದೆಮಾಲುಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿಲ್ಲ ಎಂದರೆ ಸರಿಯಲ್ಲ. ಕೃತ್ಯ ಸ್ಥಳದಲ್ಲಿ

ಸದರಿ ದಿನ ಸದರಿ ಸಮಯದಲ್ಲಿ ಆರೋಪಿಗಳು ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಮೂರು ಜನ ತಪ್ಪಿಸಿಕೊಂಡು ಹೋದ ವ್ಯಕ್ತಿಗಳ ಬಗ್ಗೆ ವಿಚಾರಣೆ ಮಾಡದೇ ಅಪೂರ್ಣ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು, ನೀಡಲಾಯಿತು.)

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ,**

**ನಂಜನಗೂಡು**